# ಮುಸುಕಿನ ಜೋಳ, ಹತ್ತಿ ಮತ್ತು ಹೆಸರಿನಲ್ಲಿ ಕೀಟ ಬಾಧೆ

**ಮುಸುಕಿನ ಜೋಳ**

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿ, ಮಾದಾಪುರ, ಕುರಿಹುಂಡಿ ಮತ್ತು ಹಗಿನವಾಳು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮುಸುಕಿನ ಜೋಳ, ಹತ್ತಿ ಮತ್ತು ಹೆಸರು ಕಾಳು ತಾಕುಗಳಿಗೆ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ಅರುಣ್ ಬಳಮಟ್ಟಿ, ಸಸ್ಯ ಸಂರಕ್ಷಣಾ ವಿಜ್ಞಾನಿ ಶ್ರೀ ಸತೀಶ್.ಎಸ್. ಮತ್ತು ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕರಾದ ಶ್ರೀ ದೀಪಕ್, ಆತ್ಮ ಯೋಜನೆಯ ಉಪ ಯೋಜನಾ ನಿರ್ದೇಶಕರಾದ ಶ್ರೀ ರವೀಂದ್ರ ಕಟ್ಟಿ ಹಾಗೂ ಕೃಷಿ ಅಧಿಕಾರಿಗಳ ತಂಡವು ದಿನಾಂಕ 18.06.2019 ರಂದು ಭೇಟಿ ನೀಡಿ ತಾಕುಗಳನ್ನು ಪರೀಕ್ಷಿಸಿದಾಗ ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡಿದ ಮುಸುಕಿನ ಜೋಳದಲ್ಲಿ ಸೈನಿಕ ಹುಳುವಿನ (Fall Army Worm) ಬಾಧೆ ಹೆಚ್ಚಾಗಿ ಕಂಡು ಬಂದಿದೆ. ಇದರ ನಿರ್ವಹಣೆಗೆ ಕೀಟನಾಶಕಗಳ ಸಿಂಪರಣೆ ಮತ್ತು ವಿಷ ಪಾಷಾಣ ತಯಾರಿಕೆ ಕುರಿತು ರೈತರಿಗೆ ಮಾಹಿತಿ ನೀಡಲಾಯಿತು.

**ಹತೋಟಿ ಕ್ರಮ :**

1. ಮರಿ ಹುಳುಗಳನ್ನ ಕೈಯಿಂದ ಆರಿಸಿ ನಾಶಪಡಿಸುವುದು
2. ಕೀಟ ಬಾಧೆ ಕಂಡ ತಕ್ಷಣ ಬಾಧಿತ ಮುಸುಕಿನ ಜೋಳದ ಸುಳಿಗೆ ಒಣ ಮಣ್ಣು ಅಥವಾ ಬೂದಿಯನ್ನ ಹಾಕುವುದು.
3. ಮೋಹಕ ಬಲೆಗಳ ಅಳವಡಿಕೆ: ಸೈನಿಕ ಹುಳುಗಳ (Fall Army Worm) ಪತಂಗಗಳನ್ನು ಆಕರ್ಷಿಸಲು ಪ್ರತಿ ಎಕರೆಗೆ 15 ಮೋಹಕ ಬಲೆಗಳನ್ನ ಅಳವಡಿಸುವುದು.
4. ಎರಡನೇಯ ಹಾಗೂ ಮೂರನೇಯ ಹಂತದ ಸೈನಿಕ ಹುಳುಗಳನ್ನು (Fall Army Worm) ಕೀಟವನ್ನು ಈ ಕೆಳಗೆ ಸೂಚಿಸಿದ ಕೀಟನಾಶಕಗಳನ್ನು ಬಳಸಿ ಸಿಂಪರಣೆ ಕೈಗೊಳ್ಳಬಹುದು,

   ಪ್ರತಿ ಲೀಟರ್ ನೀರಿಗೆ 0.4 ಗ್ರಾಂ ಇಮಾಮೆಕ್ಟಿನ್ ಬೆಂಜೋಯೇಟ್ ಅಥವಾ 0.3 ಮಿಲಿ ಸ್ಪೈನೋಸ್ಯಾಡ್ ಅಥವಾ 0.5 ಮಿಲಿ ಥೈಯೋಮೆಥಾಕ್ಸಾಂ 12.6% + ಲ್ಯಾಮ್ಡಾಸೈಲೊಥ್ರಿನ್ 9.5% ಅಥವಾ 0.5 ಮಿಲಿ ಕ್ಲೋರಾಂಟ್ರನಿಲಿಪ್ರೋಲ್ 18.5% ಎಸ್.ಸಿ ಕೀಟನಾಶಕವನ್ನು ಬೆರಸಿ ಸಿಂಪಡಿಸುವುದು

   **ವಿಷಪಾಷಾಣ (Poison bait) ಬಳಸಿ ಹತೋಟಿ ಮಾಡುವುದು :** ಪ್ರತಿಎಕೆರೆಗೆ – ಭತ್ತದ ತೌಡು 10 ಕೆಜಿ, ಬೆಲ್ಲ 2 ಕೆಜಿ, ಥಯೋಡಿಕಾರ್ಬ 100 ಗ್ರಾಂ ಮತ್ತು ನೀರು 2–3 ಲೀಟರ್.

**ವಿಧಾನ :** 10 ಕಿಲೋ ಭತ್ತದ ತೌಡಿಗೆ 2–3 ಲೀಟರ್‌ನೀರು ಹಾಗೂ 2ಕೆಜಿ ಬೆಲ್ಲವನ್ನು ಹದವಾಗಿ ಬೆರಸಿ ಮಿಶ್ರಣ ಮಾಡಿ 24 ಗಂಟೆಗಳ ಕಾಲ ಚೀಲದಲ್ಲಿ ತುಂಬಿ ಬಾಯಿ ಕಟ್ಟಿ ಇಡಬೇಕು. ಹೊಲದಲ್ಲಿ ವಿಷ ಪಾಷಾಣ ಉಪಯೋಗಿಸುವ ಅರ್ಧಗಂಟೆ ಮೊದಲು ಮಿಶ್ರಣ ಮಾಡಿದ ತೌಡಿಗೆ 100 ಗ್ರಾಂ ಥಯೋಡಿಕಾರ್ಬ ಕೀಟನಾಶಕವನ್ನು ಸಮನಾಗಿ ಬೆರಸಿ ಮೇವಿನ ಜೋಳದ ಸುಳಿಗಳಿಗೆ ಬೀಳುವಂತೆ ಹಾಕಬೇಕು.

**ಸದರಿ ವಿಷ ಪಾಷಣವು ಸಾಕು ಪ್ರಾಣಿಗಳಿಗೆ, ದನ ಕರುಗಳಿಗೆ, ಕೋಳಿ ನವಿಲುಗಳಿಗೆ ಅಪಾಯಕಾರಿ. ಅವುಗಳಿರುವಲ್ಲಿ ವಿಷಪ್ರಾಶಣ ಬಳಸಬೇಡಿ.**

ಸಂಜೆ 4 ಘಂಟೆಯ ನಂತರ ಹುಳುಗಳು ಎಲೆಗಳ ತುದಿಯ ಮೇಲೆ ಹೆಚ್ಚಾಗಿ ಕಂಡುಬರುವುದರಿಂದ ಸಿಂಪರಣೆಯನ್ನು ಸಂಜೆಯಲ್ಲಿ ಕೈಗೊಳ್ಳುವುದು ಪರಿಣಾಮಕಾರಿಯಾಗಿರುತ್ತದೆ. ಹುಳುಗಳ ಹಾವಳಿ ತೀವ್ರವಾಗಿರುವುದುದರಿಂದ ರೈತರು ಒಟ್ಟಾಗಿ ಏಕಕಾಲಕ್ಕೆ ಹತೋಟಿ ಕ್ರಮ ಕೈಗೊಳ್ಳವುದರಿಂದ ಬೆಳೆ ನಾಶವನ್ನು ಕಡಿಮೆ ಮಾಡಬಹುದು.

**ಹತ್ತಿ**

ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಕಡಿಮೆ ಮಳೆಯಾಗಿರುವುದರಿಂದ, ತಾಕುಗಳಲ್ಲಿ ತೇವಾಂಶದ ಕೊರತೆ ಹೆಚ್ಚಾಗಿದ್ದು, ಬೆಳೆಯಲ್ಲಿ ರಸ ಹೀರುವ ಕೀಟಗಳಾದ ಜಿಗಿ ಹುಳು, ಬಿಳಿ ನೊಣ ಮತ್ತು ಸಸ್ಯ ಹೇನುಗಳ ಬಾಧೆ ಕಂಡು ಬಂದಿದೆ. ಇದರ ನಿರ್ವಹಣೆಗೆ ಬೇವಿನ ಎಣ್ಣೆ 3 ಮಿಲಿ ಪ್ರತಿ ಲೀಟರ್ ನೀರಿಗೆ ಸೇರಿಸಿ ಸಿಂಪಡಿಸುವುದರಿಂದ ರಸ ಹೀರುವ ಕೀಟಗಳನ್ನ ನಿರ್ವಹಣೆ ಮಾಡಬಹುದು.

**ದ್ವಿದಳ ಧಾನ್ಯ– ಹೆಸರು ಕಾಳು**

ತೇವಾಂಶದ ಕೊರತೆ ಹೆಚ್ಚಾಗಿರುವುದರಿಂದ ಬೆಳೆಯಲ್ಲಿ ಸಸ್ಯ ಹೇನುಗಳ ಬಾಧೆ ಕಂಡು ಬಂದಿದೆ. ಇದರ ನಿರ್ವಹಣೆಗೆ ಬೇವಿನ ಎಣ್ಣೆ 3 ಮಿಲಿ ಪ್ರತಿ ಲೀಟರ್ ನೀರಿಗೆ ಸೇರಿಸಿ ಸಿಂಪಡಿಸುವುದರಿಂದ ರಸ ಹೀರುವ ಕೀಟಗಳನ್ನ ನಿರ್ವಹಣೆ ಮಾಡಬಹುದು.

ಈ ಸಂದರ್ಭದಲ್ಲಿ ಕೀಟಗಳನ್ನು ಪರೀಕ್ಷಿಸಿ ಮೇಲೆ ತಿಳಿಸಿದ ನಿರ್ವಹಣಾ ಕ್ರಮವನ್ನು ಅನುಸರಿಸಲು ಸುಮಾರು 25–30 ರೈತಬಾಂಧವರಿಗೆ ಮಾಹಿತಿ ನೀಡಲಾಯಿತು.